**ಅಸಲು ದಾವಾ ನಂಃ267/2021**
**ಪಿ.ಡಬ್ಲ್ಯೂಃ 01**

**<u>ದಿನಾಂಕಃ25-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆ : ಶ್ರೀ ಟಿ.ಟಿ.ಎ., ವಾದಿ ಪರ ವಕೀಲರಿಂದ</u>**

ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆಸಿರುವ ಅಂಶಗಳು ಸರಿ ಹಾಗೂ ಸತ್ಯವಾಗಿರುತ್ತದೆ. ಅದರಲ್ಲಿರುವ ಸಹಿ ನನ್ನದಾಗಿರುತ್ತದೆ.

ನೋಟರಿಕೃತ ವಂಶವೃಕ್ಷ ವನ್ನು ನಿಪಿ-1 ಎಂದು, ಎಂ.ಆರ್.ಹೆಚ್.13, 2013-2014 ರ ಮುಟೇಷನ್ ಪ್ರತಿಯ ದೃಢಿಕೃತ ಪ್ರತಿಯನ್ನು ನಿಪಿ-2 ಎಂದು, ರಸೀದಿ ಪಟ್ಟದ ದೃಢಿಕೃತ ನಕಲನ್ನು ನಿಪಿ-3 ಎಂದು, 1995-96 ರಿಂದ 1999-2000 ರವರೆಗಿನ ಗಿಡ್ಡಹಳ್ಳಿ ಗ್ರಾಮದ ಸರ್ವೇ ನಂಬರ್ 12/2 ಪಿ ರ ಪಹಣಿಯ ದೃಢಿಕೃತ ನಕಲನ್ನು ನಿಪಿ-4 ಎಂದು, ಎಂ.ಆರ್.2/1994-95 ರ ಮುಟೇಷನ್ ನ ದೃಢಿಕೃತ ನಕಲನ್ನು ನಿಪಿ-5 ಎಂದು, 20-01-2001 ರ ಕ್ರಯ ಪತ್ರದ ದೃಢಿಕೃತ ನಕಲನ್ನು ನಿಪಿ-6 ಎಂದು, ದಿನಾಂಕಃ 20-01-2001 ರ ಪಾಲು ವಿಭಾಗ ಪತ್ರದ ದೃಢಿಕೃತ ಪ್ರತಿಯನ್ನು ನಿಪಿ-7 ಎಂದು ಗುರುತಿಸಲಾಯಿತು.

**(ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.